ರಾಜ್ಯದಲ್ಲಿ ಅನಾಥ ಮಕ್ಕಳಿಗಾಗಿ ಕಾರ್ಯಕ್ರಮ

1422 (1720) ಶ್ರೀ. ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ): ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಾದ್ಯಂತ ಬಾಲಮಂದಿರಗಳಲ್ಲಿ ಹಾಲಿ ಇರುವ ಅನಾಥ ಮಕ್ಕಳ ಸಂಖ್ಯೆ ಎಷ್ಟು?

ಆ) ಅನಾಥ ಮಕ್ಕಳ ಕಲ್ಯಾಣಕ್ಕಾಗಿ ಹಾಲಿ ಯಾವ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ?

ಇ) ಸರ್ಕಾರದ ಈ ಕಾರ್ಯಕ್ರಮಗಳು ಸಮರ್ಪಕವಾಗಿ ಅನುಷ್ಠಾನಗೊಳ್ಳುತ್ತಿಲ್ಲ ಎಂದು ದೂರಿದ್ದು ಈ ಬಗ್ಗೆ ಸರ್ಕಾರ ಯಾವ ಯಾವ ಕ್ರಮ ಕೈಗೊಂಡಿದೆ? ತಿಳಿಸುವುದು?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು):

ಅ) ರಾಜ್ಯದಾದ್ಯಂತ ಇರುವ 24 ಬಾಲಮಂದಿಗಳಲ್ಲಿ ಮಾರ್ಚ್ 2002ರ ಅಂತ್ಯದವರೆಗೆ ಒಟ್ಟು 2191 ಮಕ್ಕಳಿದ್ದು ಇದರ ಪೈಕಿ 449 ಅನಾಥ ಮಕ್ಕಳಿರುತ್ತಾರೆ.

ಆ) ಬಾಲ ನ್ಯಾಯ ಕಾಯಿದೆ 1986ರಡಿ ರಾಜ್ಯದಾದ್ಯಂತ 24 ಬಾಲಮಂದಿರಗಳು ಕಾರ್ಯ ನಿರ್ವಹಿಸುತ್ತಿವೆ. ನಿರ್ಲಕ್ಷ್ಯ, ಅನಾಥ ಹಾಗೂ ಬಾಲಾಪರಾಧಿ ಮಕ್ಕಳನ್ನು ಬಾಲ ನ್ಯಾಯಾಲಯ/ ಬಾಲ ಕಲ್ಯಾಣ ಮಂಡಲಿಯಿಂದ ಅಭಿರಕ್ಷಣೆಗೆ ಗುರಿಪಡಿಸಿ ಮುಂದಿನ ಭವಿಷ್ಯದ ಸುಧಾರಣೆಗಾಗಿ ಹಾಗೂ ಪುನರ್ವಸತಿ ದೃಷ್ಟಿಯಿಂದ ಬಾಲಮಂದಿರಗಳಿಗೆ ದಾಖಲಿಸಿಕೊಳ್ಳಲಾಗುತ್ತಿದೆ ಮತ್ತು ಬಾಲಮಂದಿರಗಳಲ್ಲಿ ಮಕ್ಕಳಿಗೆ ಆಹಾರ, ವಸತಿ, ಉಡುಪು, ವೈದ್ಯಕೀಯ ಸೌಲಭ್ಯಗಳನ್ನು ಒದಗಿಸುವುದಲ್ಲದೆ ವಿದ್ಯಾಭ್ಯಾಸ, ವೃತ್ತಿ ತರಬೇತಿಗಳನ್ನು ನೀಡಿ ಪುನರ್ವಸತಿಯನ್ನು ಕಲ್ಪಿಸಲಾಗುತ್ತಿದೆ.

ನಿರ್ಗತಿಕ ಮತ್ತು ಅನಾಥ ಮಕ್ಕಳ ಪಾಲನೆ ಪೋಷಣೆಯ ಕಾರ್ಯಕ್ರಮದಡಿ ಸ್ವಯಂ ಸೇವಾ ಸಂಸ್ಥೆಗಳಿಗೆ ಅನುದಾನವನ್ನು ನೀಡಲಾಗುತ್ತಿದೆ ಮತ್ತು ಈ ಯೋಜನೆಯನ್ನು ಆಯಾ ಜಿಲ್ಲೆಯ ಜಿಲ್ಲಾಪಂಚಾಯತ್ ಅಡಿಯಲ್ಲಿ ಕಾರ್ಯ ರೂಪಗೊಳಿಸಲಾಗಿದೆ ಈ ಯೋಜನೆಯಡಿ ಅನಾಥ ಮಕ್ಕಳಿಗಾಗಿ ಆಹಾರ, ವಸತಿ, ವೈದ್ಯಕೀಯ ಸೌಲಭ್ಯ, ವಿದ್ಯಾಭ್ಯಾಸವನ್ನು ನೀಡಲಾಗುತ್ತಿದೆ. ಇದನ್ನು 18 ವರ್ಷ ವಯೋಮಿತಿಯೊಳಗಿನ ಅನಾಥ ಹಾಗೂ ನಿರ್ಗತಿಕ ಮಕ್ಕಳು ಇದರ ಉಪಯೋಗ ಪಡೆಯುತ್ತಿದ್ದಾರೆ.

ಇ) ಸರ್ಕಾರದ ಕಾರ್ಯಕ್ರಮಗಳನ್ನು ಸಮರ್ಪಕವಾಗಿ ಅನುಷ್ಠಾನ ಗೊಳಿಸಲಾಗುತ್ತಿದೆ. ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಉಸ್ತುವಾರಿ ಸಮಿತಿಗಳನ್ನು ರಚಿಸಲಾಗಿದೆ. ಈ ಸಮಿತಿಗಳು ಮತ್ತು ಸಂಸ್ಥೆಗಳ ಸಮರ್ಪಕ ನಿರ್ವಹಣೆ ಕುರಿತು ಮೇಲ್ವಿಚಾರಣೆ ಮಾಡಲು ಸಹಾಯಕವಾಗಿವೆ.

ಹಾಗೆಯೇ ಇಲಾಖಾ ಅಧಿಕಾರಿಗಳು ಸಂಸ್ಥೆಗಳಿಗೆ ಆಕಸ್ಮಿಕ ಭೇಟಿ ನೀಡಿ ಸಂಸ್ಥೆಯ ಕಾರ್ಯಕ್ರಮಗಳ ಮೇಲ್ವಿಚಾರಣೆ ನಡೆಸುತ್ತಿದ್ದಾರೆ. ಅಲ್ಲದೇ ಇಲಾಖೆಯ ಕಾರ್ಯಕ್ರಮಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಸಿಬ್ಬಂದಿ ಹಾಗೂ ಅಧಿಕಾರಿಗಳಿಗೆ ತರಬೇತಿಯನ್ನು ಹಮ್ಮಿಕೊಳ್ಳಲಾಗುತ್ತಿದೆ.

ತುಮಕೂರು ಜಿಲ್ಲೆಯಲ್ಲಿ ಅಂಗನವಾಡಿ ಕೇಂದ್ರಗಳನ್ನು ಪ್ರಾರಂಭಿಸುವುದು

1423 (1700) ಶ್ರೀ ಶಿವಣ್ಣ ಎಸ್ (ತುಮಕೂರು): ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುಮಕೂರು ಜಿಲ್ಲೆಯಲ್ಲಿ ಹೊಸದಾಗಿ ಅಂಗನವಾಡಿ ಕೇಂದ್ರಗಳನ್ನು ಪ್ರಾರಂಭಿಸಲು ಗುರುತಿಸಿ ಪ್ರಸ್ತಾವನೆಯನ್ನು ತಯಾರಿಸಲಾಗಿದೆಯೆ?

ಆ) ತಯಾರಿಸಿದಲ್ಲಿ ತಾಲ್ಲೂಕುವಾರು ಅವಶ್ಯಕತೆ ಇರುವ ಕೇಂದ್ರಗಳೇಷ್ಟು?

ಇ) ಈ ಪ್ರಸ್ತಾವನೆ ಯಾವ ಹಂತದಲ್ಲಿದೆ?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು): ಅ) ಹೌದು

ಆ) ತಾಲ್ಲೂಕುವಾರು ಅವಶ್ಯಕತೆ ಇರುವ ಕೇಂದ್ರಗಳ ವಿವರ ಈ ಕೆಳಗಿನಂತಿರುತ್ತದೆ.

1.	ಚಿಕ್ಕನಾಯಕನಹಳ್ಳಿ	-	102
2.	ಗುಬ್ಬಿ	-	126
3.	ತಿಪಟೂರು	-	75
4.	ತುಮಕೂರು (ಗ್ರಾ)	-	146
5.	ತುರುವೇಕೆರೆ	-	70
6.	ಕೊರಟಗೆರೆ	-	35
7.	ಕುಣಿಗಲ್	-	52
8.	ಮಧುಗಿರಿ	-	140
9.	ಪಾವಗಡ	-	63
10.	ಶಿರಾ	-	81
11.	ತುಮಕೂರು ನಗರ	-	25
			915

ಇ) ಪ್ರಸ್ತಾವನೆಯನ್ನು ಈಗಾಗಲೇ ಕೇಂದ್ರ ಸರ್ಕಾರಕ್ಕೆ ಮಂಜೂರಾತಿಗಾಗಿ ಸಲ್ಲಿಸಲಾಗಿದೆ.

ತೆಂಗಿನ ನುಸಿ ರೋಗ ನಿಯಂತ್ರಣ

1425 (1708) ಶ್ರೀ ಶಿವಣ್ಣ ಎಸ್. (ತುಮಕೂರು): ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2001-02ನೇ ಸಾಲಿನಲ್ಲಿ ತೆಂಗಿನ ನುಸಿರೋಗ ನಿಯಂತ್ರಿಸಲು ಖರೀದಿಸಲಾದ ಔಷಧಿಯೆಷ್ಟು? ಇದರ ಮೌಲ್ಯವೆಷ್ಟು?

ಆ) ಈ ಔಷಧಿಯನ್ನು ಪೂರ್ಣ ಪ್ರಮಾಣದಲ್ಲಿ ರೈತರಿಗೆ ವಿತರಿಸಲಾಯಿತೇ? ಇಲ್ಲವಾದಲ್ಲಿ ಉಳಿಕೆ ಎಷ್ಟು? ಉಳಿಕೆ ಔಷಧಿಯ ಮೊತ್ತವೆಷ್ಟು?

ಇ) ಈ ಔಷಧಿ ಖರೀದಿಗೆ ಸರ್ಕಾರ ನೀಡಿದ ಸಬ್ಸಿಡಿ ಮೊತ್ತವೆಷ್ಟು?

ಈ) ರಾಜ್ಯದಲ್ಲಿ ಈ ಔಷಧ ಉಪಯೋಗಿಸಿದ ನಂತರ ಹಾನಿಗೊಳಗಾದ ತೆಂಗಿನ ಮರದ ಬೆಳೆ ಅಂದಾಜು ಮಾಡಲಾಗಿದೆಯೇ? ಮಾಡಿದ್ದಲ್ಲಿ ಅದರ ಮೊತ್ತವೆಷ್ಟು?

ಉ) ನುಸಿ ರೋಗ ನಿಯಂತ್ರಣಕ್ಕೆ ಜಿಲ್ಲಾ ಮಟ್ಟದಲ್ಲಿ ಹಾಗೂ ತಾಲ್ಲೂಕು ಮಟ್ಟದಲ್ಲಿ ರಚಿಸಲಾಗಿದ್ದ ಟಾಸ್ಕ್ ಫೋರ್ಸ್ ಕಮಿಟಿಗಳು ಈ ಔಷಧಿಯಿಂದ ಹಾನಿಯಾದ ಅಥವಾ ಉಪಯೋಗವಾದ ಬಗ್ಗೆ ಸರ್ಕಾರಕ್ಕೆ ವರದಿ ಸಲ್ಲಿಸಿದೆಯೆ?